ರಾಜ್ಯದಲ್ಲಿರುವ ಪೋಲೀಸ್ ಸಿಬ್ಬಂದಿಯವರಿಗೆ ಗಡ್ಡ ತೆಗೆಸುವುದು.

೬೧೩. ಶ್ರೀಮತಿ ಮಂಜುಳಾ ನಾಯ್ಡು (ನರಸಿಂಹರಾಜ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದ ಪೋಲೀಸು ಸಿಬ್ಬಂದಿಗೆ ಗಡ್ಡ ತೆಗೆಯಲು ಒತ್ತಾಯ ಮಾಡುವುದರ ಬಗ್ಗೆ ಸರ್ಕಾರದ ನಿಲುವೇನು ?

ಆ) ಗಡ್ಡ ಬಿಡಲು ಸಿಖ್‌ರಿಗೆ ನೀಡಿದ ರಿಯಾಯಿತಿಯು ಮುಸಲ್ಮಾನರಿಗೂ ಅನ್ವಯಿಸಲಾಗಿತ್ತದೆಯೇ ?

ಇ) ಅಲ್ಪಸಂಖ್ಯಾತರ ಧಾರ್ಮಿಕ ನಂಬಿಕೆಗಳಿಗೆ ಮಾನ್ಯತೆ ಕೊಡುವುದು ಸರ್ಕಾರದ ನೈತಿಕ ಕರ್ತವ್ಯವಾಗಿರುವುದೆಂಬುದು ವಾಸ್ತವಾಂಶವಲ್ಲವೇ ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—

ಅ) ಕರ್ನಾಟಕ ಪೋಲೀಸು ಮ್ಯಾನುಯಲ್‌ನ ಆದೇಶಗಳ ಪ್ರಕಾರ ಕರ್ತವ್ಯದಲ್ಲಿ ನಿರತರಾಗಿರುವ ಪೋಲೀಸು ಅಧಿಕಾರಿಗಳು ಗಡ್ಡ ಮತ್ತು ಅಥವ ಉದ್ದ ಕೂದಲು ಬೆಳೆಸತಕ್ಕದ್ದಲ್ಲ.

ಆ) ಇಲ್ಲ.

ಇ) ಅವಕಾಶವಿದ್ದ ಮಟ್ಟಿಗೆ ಕಾನೂನಿನ ಚೌಕಟ್ಟಿನಲ್ಲಿ ಅಲ್ಪಸಂಖ್ಯಾತರ ಧಾರ್ಮಿಕ ನಂಬಿಕೆಗಳಿಗೆ ಸರ್ಕಾರ ಮಾನ್ಯತೆ ನೀಡುತ್ತಿದೆ. ಆದರೆ ಪೋಲೀಸ್ ಪಡೆಯಲ್ಲಿ ಸೇರಿದ ಸಿಬ್ಬಂದಿಯವರು ಯಾವಾಗಲೂ ಶಿಸ್ತಿನ ಹಿತೋಟಿಯಲ್ಲಿ ಇರಬೇಕು ಹಾಗೂ ಸ್ವಚ್ಛತೆ ಪೂರ್ವಕ ನಿರ್ವಹಿಸಬೇಕು. ಇಂಥಹ ಒಂದು ದಳದಲ್ಲಿ ಬೇರೆ ಬೇರೆ ಧಾರ್ಮಿಕ ನಂಬಿಕೆ ಪ್ರಕಾರ ನಡತೆ ಅನುಸರಿಸುವುದಕ್ಕೆ ಅವಕಾಶ ಕೊಟ್ಟರೆ ಶಿಸ್ತು ಪರಿಪಾಲನೆ ಮಾಡುವುದು ಸಾಧ್ಯವಾಗುವುದಿಲ್ಲ.

ಗೋಕಾಕ್ ತಾಲ್ಲೂಕಿನ ಯೋಗಿಕೊಳ್ಳದ ಬೆಟ್ಟದಲ್ಲಿ ಪ್ರವಾಸಿ ಕೇಂದ್ರವನ್ನು ನಿರ್ಮಿಸುವುದು

೬೧೩೭. ಶ್ರೀ ಎಂ.ವಿಲ್. ಮುತ್ತಣ್ಣನವರ್ (ಗೋಕಾಕ್).—ಮಾನ್ಯ ವಾರ್ತಾ ಯುವ ಜನ ಸೇವಾ ಕ್ರೀಡಾ ಹಾಗೂ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗೋಕಾಕ್ ತಾಲ್ಲೂಕಿನ ಯೋಗಿಕೊಳ್ಳದ ಬೆಟ್ಟದಲ್ಲಿರುವ ಪುರಾತನ ದೇವಸ್ಥಾನವಿದ್ದು ಅದು ಐತಿಹಾಸಿಕ ಸ್ಥಳವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಐತಿಹಾಸಿಕ ಸ್ಥಳವಾಗಿರುವ ಸದರಿ ಸ್ಥಳದಲ್ಲಿ ಪ್ರವಾಸೋದ್ಯಮ ಕೇಂದ್ರವನ್ನು ನಿರ್ಮಿಸಲು ಸರ್ಕಾರದವರ ಉದ್ದೇಶವೇನಾದರೂ ಇದೆಯೇ ?

ಇ) ಹಾಗಿಲ್ಲದಿದ್ದಲ್ಲಿ ಸದರಿ ಸ್ಥಳವನ್ನು ವೀಕ್ಷಿಸಿ ಹಾಗೂ ಪರಿಶೀಲಿಸಿ ಸರ್ಕಾರದವರು ಪ್ರವಾಸೋದ್ಯಮ ಕೇಂದ್ರವನ್ನಾಗಿ ಮಾಡಲು ಕ್ರಮ ಕೈಗೊಳ್ಳುವರೇ ?

ಶ್ರೀ ಜೀವರಾಜ ಆಳ್ವ (ವಾರ್ತಾ ಯುವ ಜನ ಸೇವಾ ಕ್ರೀಡಾ ಮಂತ್ರಿಗಳು).—

ಅ) ಬಂದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.